# ಪಂಚಾಯತ್ ಉಪಬಂಧಗಳ (ಅನುಸೂಚಿತ ಪ್ರದೇಶಗಳಿಗೆ ವಿಸ್ತರಣೆ) ಅಧಿನಿಯಮ, 1996

**04.05.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 33.ನೇ ಸಂಪುಟದ 1ನೇ ಸಂಚಿಕೆಯಲ್ಲಿ 72 ರಿಂದ 74ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ**

## ವಿಷಯಾನುಕ್ರಮಣಿಕೆ

**ಪ್ರಕರಣಗಳು :**

1. ಚಿಕ್ಕ ಹೆಸರು
2. ಪರಿಭಾಷೆ
3. ಸಂವಿಧಾನದ IXನೇ ಭಾಗದ ವಿಸ್ತರಣೆ
4. ಸಂವಿಧಾನದ IXನೇ ಭಾಗದ ವಿನಾಯಿತಿಗಳು ಮತ್ತು ಮಾರ್ಪಾಟುಗಳು
5. ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಮತ್ತು ಪಂಚಾಯಿತಿಗಳನ್ನು ಮುಂದುವರಿಸುವುದು

## ಪಂಚಾಯತ್ ಉಪಬಂಧಗಳ (ಅನುಸೂಚಿತ ಪ್ರದೇಶಗಳಿಗೆ ವಿಸ್ತರಣೆ) ಅಧಿನಿಯಮ, 1996

(1996ರ ಅಧಿನಿಯಮ ಸಂಖ್ಯೆ 40)

[ಡಿಸೆಂಬರ್ 24, 1996]

ಪಂಚಾಯತಿಗಳಿಗೆ ಸಂಬಂಧಿಸಿದಂತೆ ಸಂವಿಧಾನದ IXನೇ ಭಾಗದ ಉಪಬಂಧಗಳನ್ನು ಅನುಸೂಚಿತ ಪ್ರದೇಶಗಳಿಗೆ ವಿಸ್ತರಿಸುವುದಕ್ಕೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು.**- ಈ ಅಧಿನಿಯಮವನ್ನು ಪಂಚಾಯತ್ ಉಪಬಂಧಗಳ (ಅನುಸೂಚಿತ ಪ್ರದೇಶಗಳಿಗೆ ವಿಸ್ತರಣೆ) ಅಧಿನಿಯಮ, 1996 ಎಂದು ಕರೆಯತಕ್ಕದ್ದು.

**2. ಪರಿಭಾಷೆ.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು "ಅನುಸೂಚಿತ ಪ್ರದೇಶಗಳು" ಎಂದರೆ, ಸಂವಿಧಾನದ 244ನೇ ಅನುಚ್ಛೇದದ (1)ನೇ ಖಂಡದಲ್ಲಿ ಉಲ್ಲೇಖಿಸಲಾಗಿರುವ ಅನುಸೂಚಿತ ಪ್ರದೇಶಗಳು.

**3. ಸಂವಿಧಾನದ IXನೇ ಭಾಗದ ವಿಸ್ತರಣೆ.**- ಪಂಚಾಯತಿಗಳಿಗೆ ಸಂಬಂಧಿಸಿದ ಸಂವಿಧಾನದ IXನೇ ಭಾಗದ ಉಪಬಂಧಗಳನ್ನು 4ನೇ ಪ್ರಕರಣದಲ್ಲಿ ಒದಗಿಸಲಾಗಿರುವ ವಿನಾಯಿತಿಗಳು ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ಈ ಮೂಲಕ ಅನುಸೂಚಿತ ಪ್ರದೇಶಗಳಿಗೆ ವಿಸ್ತರಿಸಲಾಗಿದೆ.

**4. ಸಂವಿಧಾನದ IXನೇ ಭಾಗದ ವಿನಾಯಿತಿಗಳು ಮತ್ತು ಮಾರ್ಪಾಟುಗಳು.**- ಸಂವಿಧಾನದ IXನೇ ಭಾಗದಲ್ಲಿ ಏನೇ ಇದ್ದರೂ, ಒಂದು ರಾಜ್ಯದ ವಿಧಾನ ಮಂಡಲವು ಕೆಳಕಂಡ ಲಕ್ಷಣಗಳಿಗೆ ಅಸಂಗತವಾಗಿರುವ ಯಾವುದೇ ಕಾನೂನನ್ನು ಆ ಭಾಗದ ಮೇರೆಗೆ ಮಾಡತಕ್ಕುದಲ್ಲ, ಎಂದರೆ:-

(ಎ) ಪಂಚಾಯತಿಗಳ ಬಗ್ಗೆ ರಚಿಸಬಹುದಾದ ಒಂದು ರಾಜ್ಯದ ಶಾಸನವು ರೂಢಿಗತ ಕಾನೂನು, ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳು ಮತ್ತು ಸಮುದಾಯ ಸಂಪನ್ಮೂಲಗಳ ಸಾಂಪ್ರದಾಯಿಕ ನಿರ್ವಹಣಾ ಪದ್ಧತಿಗಳು- ಇವುಗಳಿಗೆ ಅನುಗುಣವಾಗಿರತಕ್ಕದ್ದು;

(ಬಿ) ಒಂದು ಗ್ರಾಮವು ಸಾಮಾನ್ಯವಾಗಿ ಸಂಪ್ರದಾಯ ಮತ್ತು ರೂಢಿಗನುಸಾರವಾಗಿ ತನ್ನ ವ್ಯವಹಾರಗಳನ್ನು ನಿರ್ವಹಿಸುವ ಸಮುದಾಯದಿಂದ ಕೂಡಿರುವ ವಾಸಸ್ಥಳ ಅಥವಾ ವಾಸಸ್ಥಳಗಳ ಸಮೂಹವನ್ನು ಅಥವಾ ಸಣ್ಣ ಹಳ್ಳಿ ಅಥವಾ ಸಣ್ಣ ಹಳ್ಳಿಗಳ ಸಮೂಹವನ್ನು ಒಳಗೊಂಡಿರತಕ್ಕದ್ದು;

(ಸಿ) ಪ್ರತಿಯೊಂದು ಗ್ರಾಮವು, ಗ್ರಾಮ ಮಟ್ಟದಲ್ಲಿ ಪಂಚಾಯತಿಯ ಮತದಾರರ ಪಟ್ಟಿಯಲ್ಲಿ ಹೆಸರುಗಳಿರುವ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ಗ್ರಾಮ ಸಭೆಯನ್ನು ಹೊಂದಿರತಕ್ಕದ್ದು;

(ಡಿ) ಪ್ರತಿಯೊಂದು ಗ್ರಾಮ ಸಭೆಯು, ಜನರ ಸಂಪ್ರದಾಯಗಳು ಮತ್ತು ರೂಢಿಗಳನ್ನು, ಅವರ ಸಾಂಸ್ಕೃತಿಕ ವೈಶಿಷ್ಟ್ಯವನ್ನು, ಸಮುದಾಯದ ಸಂಪನ್ಮೂಲವನ್ನು ಮತ್ತು ವಿವಾದಗಳನ್ನು ಬಗೆಹರಿಸುವ ರೂಢಿಗತ ವಿಧಾನವನ್ನು ಕಾಪಾಡಿಕೊಂಡು ಬರಲು ಮತ್ತು ಸಂರಕ್ಷಿಸಿಕೊಂಡು ಬರಲು ಸಮರ್ಥವಾಗಿರತಕ್ಕದ್ದು;

(ಇ) ಪ್ರತಿಯೊಂದು ಗ್ರಾಮ ಸಭೆಯು-

(i) ಪಂಚಾಯತಿಯು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಪರಿಯೋಜನೆಗಳನ್ನು ಗ್ರಾಮ ಮಟ್ಟದಲ್ಲಿ ಜಾರಿಗೊಳಿಸುವ ಸಲುವಾಗಿ ಕೈಗೆತ್ತಿಕೊಳ್ಳುವುದಕ್ಕೆ ಮುಂಚೆ ಅಂಥ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಪರಿಯೋಜನೆಗಳಿಗೆ ಅನುಮೋದನೆ ನೀಡತಕ್ಕದ್ದು;

(ii) ಬಡತನ ನಿವಾರಣೆ ಮತ್ತು ಇತರ ಕಾರ್ಯಕ್ರಮಗಳ ಮೇರೆಗೆ ಫಲಾನುಭವಿ ವ್ಯಕ್ತಿಗಳನ್ನು ಗುರುತಿಸುವಲ್ಲಿ ಅಥವಾ ಆಯ್ಕೆ ಮಾಡುವಲ್ಲಿ ಜವಾಬ್ದಾರಿಯಾಗಿರತಕ್ಕದ್ದು;

(ಎಫ್) ಗ್ರಾಮಮಟ್ಟದ ಪ್ರತಿಯೊಂದು ಪಂಚಾಯತಿಯು (ಇ) ಖಂಡದಲ್ಲಿ ಉಲ್ಲೇಖಿಸಲಾದ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಪರಿಯೋಜನೆಗಳಿಗೆ, ಆ ಪಂಚಾಯತಿಯು ನಿಧಿಗಳನ್ನು ಬಳಸಿಕೊಂಡ ಬಗ್ಗೆ ಒಂದು ಪ್ರಮಾಣಪತ್ರವನ್ನು ಗ್ರಾಮ ಸಭೆಯಿಂದ ಪಡೆಯುವುದು ಅಗತ್ಯವಾಗಿರತಕ್ಕದ್ದು;

(ಜಿ) ಪ್ರತಿಯೊಂದು ಪಂಚಾಯತಿಯ ಅನುಸೂಚಿತ ಪ್ರದೇಶಗಳಲ್ಲಿ ಸ್ಥಾನಗಳ ಮೀಸಲಾತಿಯು, ಸಂವಿಧಾನದ IXನೇ ಭಾಗದ ಮೇರೆಗೆ ಮೀಸಲಾತಿಯನ್ನು ಯಾವ ಸಮುದಾಯದವರಿಗೆ ನೀಡಲು ಉದ್ದೇಶಿಸಲಾಗಿದೆಯೋ ಆ ಸಮುದಾಯದ ಜನಸಂಖ್ಯೆಯ ಪ್ರಮಾಣಕ್ಕನುಸಾರವಾಗಿರತಕ್ಕದ್ದು:

ಪರಂತು, ಅನುಸೂಚಿತ ಬುಡಕಟ್ಟಿನವರಿಗಾಗಿನ ಮೀಸಲಾತಿಯು ಒಟ್ಟು ಸ್ಥಾನಗಳ ಸಂಖ್ಯೆಯ ಅರ್ಧಕ್ಕಿಂತ ಕಡಿಮೆಯಾಗಿರತಕ್ಕದ್ದಲ್ಲ:

ಮತ್ತೂ ಪರಂತು, ಎಲ್ಲಾ ಮಟ್ಟಗಳಲ್ಲಿ ಪಂಚಾಯತಿಗಳ ಅಧ್ಯಕ್ಷರ ಎಲ್ಲಾ ಸ್ಥಾನಗಳನ್ನು ಅನುಸೂಚಿತ ಬುಡಕಟ್ಟಿನವರಿಗೆ ಮೀಸಲಿಡತಕ್ಕದ್ದು;

(ಎಚ್) ಮಧ್ಯದ ಮಟ್ಟದ ಪಂಚಾಯಿತಿಯಲ್ಲಿ ಅಥವಾ ಜಿಲ್ಲಾ ಮಟ್ಟದ ಪಂಚಾಯತಿಯಲ್ಲಿ ಪ್ರಾತಿನಿಧ್ಯ ಹೊಂದಿಲ್ಲದಿರುವಂಥ ಅನುಸೂಚಿತ ಬುಡಕಟ್ಟಿಗೆ ಸೇರಿದ ವ್ಯಕ್ತಿಗಳನ್ನು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಬಹುದು:

ಪರಂತು, ಅಂತಹ ನಾಮನಿರ್ದೇಶನವು ಆ ಪಂಚಾಯತಿಯಲ್ಲಿ ಚುನಾಯಿತರಾಗುವ ಒಟ್ಟು ಸದಸ್ಯರ 10ನೇ ಒಂದು ಭಾಗವನ್ನು ಮೀರತಕ್ಕದ್ದಲ್ಲ;

(ಐ) ಅಭಿವೃದ್ಧಿ ಪ್ರಾಜೆಕ್ಟ್‌ಗಾಗಿ ಅನುಸೂಚಿತ ಪ್ರದೇಶಗಳಲ್ಲಿ ಭೂಮಿಯನ್ನು ಆರ್ಜಿಸುವ ಮುಂಚೆ ಮತ್ತು ಅನುಸೂಚಿತ ಪ್ರದೇಶಗಳ ಅಂಥ ಪ್ರಾಜೆಕ್ಟ್‌ಗಳಿಂದ ಬಾಧಿತರಾದ ಜನರಿಗೆ ಪುನರ್‌ವ್ಯವಸ್ಥೆ ಅಥವಾ ಪುನರ್‌ವಸತಿ ಕಲ್ಪಿಸುವುದಕ್ಕೆ ಮುಂಚೆ ಸೂಕ್ತ ಮಟ್ಟದಲ್ಲಿನ ಗ್ರಾಮಸಭೆ ಅಥವಾ ಪಂಚಾಯಿತಿಗಳೊಂದಿಗೆ ಸಮಾಲೋಚಿಸತಕ್ಕದ್ದು; ಮತ್ತು ಅನುಸೂಚಿತ ಪ್ರದೇಶಗಳಲ್ಲಿ ಪ್ರಾಜೆಕ್ಟ್‌ಗಳ ವಾಸ್ತವ ಯೋಜನೆ ಮತ್ತು ಜಾರಿಯನ್ನು ರಾಜ್ಯ ಮಟ್ಟದಲ್ಲಿ ಸಮನ್ವಯಗೊಳಿಸತಕ್ಕದ್ದು;

(ಜೆ) ಅನುಸೂಚಿತ ಪ್ರದೇಶಗಳಲ್ಲಿನ ಸಣ್ಣ ನೀರಾವರಿ ನಿಕಾಯ ಯೋಜನೆ ಮತ್ತು ನಿರ್ವಹಣೆಯನ್ನು ಯುಕ್ತ ಮಟ್ಟದಲ್ಲಿನ ಪಂಚಾಯತಿಗಳಿಗೆ ವಹಿಸಿಕೊಡತಕ್ಕದ್ದು;

(ಕೆ) ಅನುಸೂಚಿತ ಪ್ರದೇಶಗಳಲ್ಲಿ ಸಣ್ಣ ಖನಿಜಗಳಿಗಾಗಿ ಅನ್ವೇಷಣಾ ಲೈಸೆನ್ಸ್‌ಗಳನ್ನು ಅಥವಾ ಗಣಿಗಾರಿಕೆಯ ಗುತ್ತಿಗೆಯನ್ನು ನೀಡುವ ಮುಂಚೆ ಗ್ರಾಮಸಭೆಯು ಅಥವಾ ಯುಕ್ತ ಮಟ್ಟದ ಪಂಚಾಯತಿಗಳು ಶಿಫಾರಸ್ಸುಗಳನ್ನು ಕಡ್ಡಾಯವಾಗಿ ಮಾಡಿರತಕ್ಕದ್ದು;

(ಎಲ್) ಹರಾಜಿನ ಮೂಲಕ ಸಣ್ಣ ಖನಿಜಗಳ ಗಣಿಗಾರಿಕೆಗಾಗಿ ರಿಯಾಯಿತಿ ನೀಡುವಲ್ಲಿ ಗ್ರಾಮಸಭೆಯು ಅಥವಾ ಯುಕ್ತ ಮಟ್ಟದ ಪಂಚಾಯತಿಗಳು ಮೊದಲೇ ಶಿಫಾರಸುಗಳನ್ನು ಮಾಡಿರತಕ್ಕದ್ದು;

(ಎಂ) ಅನುಸೂಚಿತ ಪ್ರದೇಶಗಳಲ್ಲಿ ಪಂಚಾಯತಿಗಳು ಸ್ವಯಂ ಆಡಳಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಅವಶ್ಯಕ ಎನಿಸಬಹುದಾದಂತಹ ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಅವುಗಳಿಗೆ ನೀಡುವಾಗ ರಾಜ್ಯ ವಿಧಾನಮಂಡಲವು ಯುಕ್ತ ಮಟ್ಟದಲ್ಲಿನ ಪಂಚಾಯತಿಗಳಿಗೆ ಮತ್ತು ಗ್ರಾಮ ಸಭೆಗಳಿಗೆ ಈ ಮುಂದಿನ ಅಧಿಕಾರಗಳನ್ನು ನಿರ್ದಿಷ್ಟವಾಗಿ ನೀಡಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು, ಎಂದರೆ,-

(i) ಯಾವುದೇ ಮಾದಕ ದ್ರವ್ಯದ ನಿಷೇಧವನ್ನು ಜಾರಿಗೊಳಿಸುವ ಅಥವಾ ಅದರ ಮಾರಾಟ ಅಥವಾ ಬಳಕೆಯ ಮೇಲೆ ನಿಯಂತ್ರಣ ಅಥವಾ ನಿರ್ಬಂಧ ಹೇರುವ ಅಧಿಕಾರ;

(ii) ಸಣ್ಣ ಅರಣ್ಯ ಉತ್ಪನ್ನಗಳ ಒಡೆತನ;

(iii) ಅನುಸೂಚಿತ ಪ್ರದೇಶಗಳಲ್ಲಿನ ಭೂಮಿಯ ಪರಭಾರೆಯನ್ನು ಪ್ರತಿಬಂಧಿಸುವ ಮತ್ತು ಅನುಸೂಚಿತ ಬುಡಕಟ್ಟಿನವರ ಭೂಮಿಯನ್ನು ಕಾನೂನಿಗೆ ವಿರುದ್ಧವಾಗಿ ಪರಭಾರೆ ಮಾಡಿರುವಲ್ಲಿ ಅದನ್ನು ಪುನಃ ಪಡೆಯಲು ಸೂಕ್ತ ಕ್ರಮ ಕೈಗೊಳ್ಳುವ ಅಧಿಕಾರ;

(iv) ಗ್ರಾಮ ಮಾರುಕಟ್ಟೆಗಳನ್ನು ಯಾವುದೇ ಹೆಸರಿನಿಂದ ಕರೆಯಲಿ, ಅವುಗಳನ್ನು ನಿರ್ವಹಿಸುವ ಅಧಿಕಾರ;

(v) ಅನುಸೂಚಿತ ಬುಡಕಟ್ಟಿನವರಿಗೆ ಹಣವನ್ನು ಸಾಲವಾಗಿ ನೀಡುವುದರ ಮೇಲೆ ನಿಯಂತ್ರಣವನ್ನು ಚಲಾಯಿಸುವ ಅಧಿಕಾರ;

(vi) ಎಲ್ಲಾ ಸಾಮಾಜಿಕ ವಲಯಗಳಲ್ಲಿರುವ ಸಂಸ್ಥೆಗಳ ಮತ್ತು ಅವುಗಳ ಸಿಬ್ಬಂದಿಯ ಮೇಲೆ ನಿಯಂತ್ರಣ ಚಲಾಯಿಸುವ ಅಧಿಕಾರ;

(vii) ಬುಡಕಟ್ಟು ಉಪಯೋಜನೆಗಳೂ ಸೇರಿದಂತೆ ಸ್ಥಳೀಯ ಯೋಜನೆಗಳು ಮತ್ತು ಅವುಗಳ ಸಂಪನ್ಮೂಲಗಳ ಮೇಲೆ ನಿಯಂತ್ರಣ ಚಲಾಯಿಸುವ ಅಧಿಕಾರ;

(ಎನ್) ಪಂಚಾಯತಿಗಳು ಸ್ವಯಂ ಆಡಳಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಸಮರ್ಥವಾಗುವಂತೆ ಅವುಗಳಿಗೆ ಅವಶ್ಯವಿರಬಹುದಾದ ಅಧಿಕಾರಗಳು ಹಾಗೂ ಪ್ರಾಧಿಕಾರವನ್ನು ನೀಡಬಹುದಾದ ರಾಜ್ಯ ಶಾಸನಗಳು, ಉನ್ನತ ಮಟ್ಟದಲ್ಲಿನ ಪಂಚಾಯತಿಗಳು, ಕೆಳಮಟ್ಟದಲ್ಲಿನ ಯಾವುದೇ ಪಂಚಾಯತಿಯ ಅಥವಾ ಗ್ರಾಮಸಭೆಯ ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಕಸಿದುಕೊಳ್ಳದಿರುವುದನ್ನು ಸುನಿಶ್ಚಿತಗೊಳಿಸುವ ರಕ್ಷಣಾ ಕ್ರಮಗಳನ್ನು ಒಳಗೊಂಡಿರತಕ್ಕದ್ದು;

(ಓ) ಅನುಸೂಚಿತ ಪ್ರದೇಶಗಳಲ್ಲಿರುವ ಜಿಲ್ಲಾ ಮಟ್ಟಗಳ ಪಂಚಾಯತಿಗಳಲ್ಲಿಯ ಆಡಳಿತಾತ್ಮಕ ವ್ಯವಸ್ಥೆಗಳನ್ನು ರೂಪಿಸುವಲ್ಲಿ ರಾಜ್ಯ ವಿಧಾನಮಂಡಲವು, ಸಂವಿಧಾನದ ಆರನೇ ಅನುಸೂಚಿಯ ಮಾದರಿಯನ್ನು ಅನುಸರಿಸಲು ಪ್ರಯತ್ನಿಸತಕ್ಕದ್ದು.

**5. ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಮತ್ತು ಪಂಚಾಯತಿಗಳನ್ನು ಮುಂದುವರಿಸುವುದು.**- ಈ ಅಧಿನಿಯಮದ ಮೂಲಕ ನೀಡಿರುವ ವಿನಾಯಿತಿಗಳು ಮತ್ತು ಮಾಡಿರುವ ಮಾರ್ಪಾಟುಗಳೊಂದಿಗೆ, ಸಂವಿಧಾನದ IXನೇ ಭಾಗದಲ್ಲಿ ಏನೇ ಇದ್ದರೂ, ಈ ಅಧಿನಿಯಮವು ರಾಷ್ಟ್ರಪತಿಯ ಸಮ್ಮತಿ ಪಡೆದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅನುಸೂಚಿತ ಪ್ರದೇಶಗಳಲ್ಲಿರುವ ಪಂಚಾಯತಿಗಳಿಗೆ ಸಂಬಂಧಿಸಿ, ಅಂಥ ವಿನಾಯಿತಿಗಳು ಮತ್ತು ಮಾರ್ಪಾಟುಗಳೊಂದಿಗೆ IXನೇ ಭಾಗದ ಉಪಬಂಧಗಳಿಗೆ ಅಸಂಗತವಾಗಿರುವಂತೆ ಜಾರಿಯಲ್ಲಿರುವ ಯಾವುದೇ ಕಾನೂನಿನ ಯಾವುದೇ ಉಪಬಂಧವು, ಸಕ್ಷಮ ವಿಧಾನಮಂಡಲವು ಅಥವಾ ಇತರ ಸಕ್ಷಮ ಪ್ರಾಧಿಕಾರವು ಅದನ್ನು ತಿದ್ದುಪಡಿ ಮಾಡುವವರೆಗೆ ಅಥವಾ ನಿರಸನಗೊಳಿಸುವವರೆಗೆ ಅಥವಾ ಈ ಅಧಿನಿಯಮವು ರಾಷ್ಟ್ರಪತಿಯ ಸಮ್ಮತಿ ಪಡೆದ ದಿನಾಂಕದಿಂದ ಒಂದು ವರ್ಷ ಮುಕ್ತಾಯಗೊಳ್ಳುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು:

ಪರಂತು, ಅಂಥ ದಿನಾಂಕದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲ ಪಂಚಾಯತಿಗಳು, ಅವುಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ ಆ ರಾಜ್ಯದ ವಿಧಾನ ಸಭೆಯು ಅಥವಾ ರಾಜ್ಯವು ವಿಧಾನ ಪರಿಷತ್ತನ್ನು ಹೊಂದಿರುವ ಸಂದರ್ಭದಲ್ಲಿ ಆ ರಾಜ್ಯದ ವಿಧಾನಮಂಡಲದ ಎರಡೂ ಸದನಗಳು ನಿರ್ಣಯವೊಂದನ್ನು ಅಂಗೀಕರಿಸುವ ಮೂಲಕ ಅವುಗಳನ್ನು ವಿಸರ್ಜನೆಗೊಳಿಸಿದ ಹೊರತು, ಅವು ತಮ್ಮ ಅವಧಿಯು ಮುಕ್ತಾಯವಾಗುವವರೆಗೆ ಮುಂದುವರಿಯತಕ್ಕದ್ದು.

* * *